**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.545/2023**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಗಬ್ಬೂರು ಪೊಲೀಸ ಠಾಣೆ.

**ವಿರುದ್ಧ –**

ಆರೋಪಿತರಾದ

1. ಸುರೇಶ ತಂದೆ ಬುಸಪ್ಪ, ವಯಸ್ಸುಃ 35 ವರ್ಷಗಳು, ಉಃ ಚಾಲಕ,

2. ಬುಸಪ್ಪ ತಂದೆ ಕರಿಬಸಣ್ಣ, ವಯಸ್ಸುಃ 60 ವರ್ಷಗಳು, ಉಃ ಒಕ್ಕಲುತನ,

3. ಇಂದ್ರಮ್ಮ @ ಲಕ್ಷ್ಮೀ ಗಂಡ ಬುಸಪ್ಪ, ವಯಸ್ಸುಃ 45 ವರ್ಷಗಳು, ಉಃ ಮನೆಕೆಲಸ,

4. ಉಮೇಶ ತಂದೆ ಬುಸಪ್ಪ, ವಯಸ್ಸುಃ 45 ವರ್ಷಗಳು, ಉಃ ಒಕ್ಕಲುತನ,

5. ಸಾವಿತ್ರಿ ಗಂಡ ಗುಂಡಪ್ಪ, ವಯಸ್ಸುಃ 30 ವರ್ಷಗಳು, ಉಃ ಮನೆಕೆಲಸ, ಎಲ್ಲರೂ ಸಾಃ ಗೋವಿಂದಪಲ್ಲಿ, ತಾಃ ದೇವದುರ್ಗ.

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮಗಳ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ–

ಗಬ್ಬೂರು ಪೊಲೀಸ್ ಠಾಣಾ ಸರಹದ್ದು, ದೇವದುರ್ಗ ತಾಲ್ಲೂಕು, ಗೋವಿಂದಪಲ್ಲಿ ಗ್ರಾಮದಲ್ಲಿ 1 ನೇ ಆರೋಪಿತನು ಚಾಸಾ–1 ರವರನ್ನು 12 ವರ್ಷಗಳ ಹಿಂದೆ ಮದುವೆ ಆಗಿದ್ದು, ಸದರಿ ಚಾಸಾ–1 ರವರಿಗೆ ಬಾಯಿಗೆ ಬಂದಂತೆ ಬೈದು ವಿನಾಕಾರಣ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 498(ಎ) ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ದಿನಾಂಕ 01.12.2022 ರಂದು ರಾತ್ರಿ 10.00 ಗಂಟೆ ಸಮಯದಲ್ಲಿ ಆರೋಪಿತರಾದ ನೀವುಗಳು ಅಪರಾಧವೆಸಗುವ ಏಕೋದ್ದೇಶದಿಂದ ಅಕ್ರಮಕೂಟವನ್ನು ರಚಿಸಿಕೊಂಡು ಅದರ ಸದಸ್ಯರಾಗುವ ಮೂಲಕ ಭಾರತ ದಂಡ ಸಂಹಿತೆ ಕಲಂ.143 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ರಿಂದ 5 ನೇ ಆರೋಪಿತರಾದ ನೀವುಗಳು, ಸದರಿ ಅಕ್ರಮ ಕೂಟದ ಸದಸ್ಯರಾಗಿ ದೊಂಬಿ ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ.147 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ನೇ ಆರೋಪಿತನು ಸಾಕ್ಷಿ–1 ರವರಿಗೆ ಕೂದಲು ಹಿಡಿದು ಮನೆಯಿಂದ ಹೊರಗಡೆ ಎಳೆದುಕೊಂಡು ಬಂದು ಕೈಯಿಂದ ತಲೆಗೆ ಹೊಡೆದು ಕಾಲಿನಿಂದ ಒದ್ದು ನೆಲಕ್ಕೆ ಕೆಡವಿದ್ದು ಹಾಗೂ 2 ನೇ ಆರೋಪಿತರಾದ ನೀವು ಸಾಕ್ಷಿ–1 ರವರಿಗೆ ಕೈಹಿಡಿದು ಎಳೆದು ಇವಳನ್ನು ಕೊಂದು ಬಿಡು ಎಂದು ಮೈಗೆ ಕೈಯಿಂದ ಗುದ್ದಿ ಮೂಕಪೆಟ್ಟುಗೊಳಿಸಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿತರಾದ ನೀವು ಸಾಕ್ಷಿ–1 ರವರಿಗೆ ಕೈಹಿಡಿದು ಎಳೆದು ಇವಳನ್ನು ಕೊಂಡು ಬಿಡು ಎಂದು ಮೈಗೆ ಕೈಯಿಂದ ಗುದ್ದಿ ಮೂಕಪೆಟ್ಟುಗೊಳಿಸಿ ಅವಮಾನ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 354 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 3 ನೇ ಆರೋಪಿತರಾದ ನೀವು ಇವಳನ್ನು ಪೆಟ್ರೋಲ್ ಹಾಕಿ ಸುಟ್ಟು ಬಿಡಿ ಎಂದು 1 ನೇ ಆರೋಪಿತನಿಗೆ ಪ್ರಚೋದನಗೆ ನೀಡಿದ್ದು ಹಾಗೂ 2 ರಿಂದ 4 ನೇ ಆರೋಪಿತರಾದ ನೀವುಗಳು ನಿನ್ನ ಹೆಂಡತಿಯನ್ನು ಹೊಡೆದು ಓಡಿಸು ನಿನಗೆ ಇನ್ನೊಂದು

ಮದುವೆ ಮಾಡುತ್ತೇವೆ ಎಂದು 1 ನೇ ಆರೋಪಿತನಿಗೆ ಪ್ರಚೋದನಗೆ ನೀಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 109 ಸಹವಾಚಕ ಕಲಂ 149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಚಾಸಾ–1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಚಾಸಾ–1 ರವರಿಗೆ ಜೀವದ ಬೇದರಿಕೆ ಹಾಕಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.149 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 29.12.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ,**
**ದೇವದುರ್ಗ.**

**ಸಿ.ಸಿ. ನಂ.545/2023**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಗಬ್ಬೂರು ಪೊಲೀಸ ಠಾಣೆ.

**ವಿರುದ್ಧ** –

ಆರೋಪಿತರಾದ

1. ಸುರೇಶ ತಂದೆ ಬುಸಪ್ಪ,
2. ಬುಸಪ್ಪ ತಂದೆ ಕರಿಬಸಣ್ಣ,
3. ಇಂದ್ರಮ್ಮ @ ಲಕ್ಷ್ಮೀ ಗಂಡ ಬುಸಪ್ಪ,
4. ಉಮೇಶ ತಂದೆ ಬುಸಪ್ಪ,
5. ಸಾವಿತ್ರಿ ಗಂಡ ಗುಂಡಪ್ಪ,

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ–

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ–

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.

ಆರೋಪಿತರ ಸಹಿ